ಓಎಸ್. 79/2022

ಪಿ ಡಬ್ಲ್ಯೂ ನಂ. - 1

<u>ದಿನಾಂಕಃ 04.12.2024 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು</u>

<u>ಮುಂದುವರೆದ ಮುಖ್ಯ ವಿಚಾರಣೆಃ ವಾದಿಯ ಪರ ವಕೀಲರಾದ ಶ್ರೀ.ಕೆ.ವಿ.ಎ ರವರಿಂದ</u>

ನಾನು ರಂಗಮ್ಮನ ಮೊದಲನೇ ಸೊಸೆ ಅಲ್ಲ ಎಂದು ಪ್ರತಿವಾದಿಯರು ಹೇಳಿರುವುದು ಸುಳ್ಳು. ದಾವಾ ಐಟಂ 2 ರ ಆಸ್ತಿ ಮತ್ತು ನನಗೆ ಯಾವುದೇ ಸಂಬಂಧ ಇಲ್ಲ ಎಂದು ಹೇಳಿರುವುದು ಸುಳ್ಳು ಹಾಗೂ ಸದರಿ ಆಸ್ತಿ ನನ್ನ ಹೆಸರಿನಲ್ಲಿ ಇರುತ್ತದೆ. ಬ್ಯಾಂಕಿನಲ್ಲಿ ಸಾಲ ತೆಗೆದುಕೊಳ್ಳಲು ಕರಾರು ಮಾಡಿಕೊಡಬೇಕು ಎಂದು ಹೇಳಿದ್ದರಿಂದ ದಾವಾ ಐಟಂ 2 ರ ಆಸ್ತಿಯನ್ನು 2 ನೇ ಪ್ರತಿವಾದಿಯ ಗಂಡನ ಹೆಸರಿಗೆ ಕರಾರನ್ನು ಮಾಡಿಕೊಟ್ಟಿದ್ದೇನೆ. ಆದ್ದರಿಂದ ಆ ಆಸ್ತಿ ನನ್ನ ಸ್ವಂತ ಆಸ್ತಿಯಾಗಿದೆ. 2 ನೇ ಪ್ರತಿವಾದಿಯ ಗಂಡ ನಡೆಸುತ್ತಿದ್ದ ಅಂಗಡಿಯ ಜಾಗವನ್ನು ಅದರ ಮಾಲೀಕನು ಬಿಟ್ಟು ಕೊಡುವಂತೆ ಒತ್ತಾಯ ಮಾಡುತ್ತಿದ್ದ ಕಾರಣ ಅಂಗಡಿ ನಡೆಸಲು ಅನೂಕೂಲವಾಗಲಿ ಎಂದು ನಾನು ದಾವಾ ಐಟಂ 2 ರ ಆಸ್ತಿಯನ್ನು 2 ನೇ ಪ್ರತಿವಾದಿಯ ಗಂಡನಿಗೆ ಕರಾರು ಮಾಡಿಕೊಟ್ಟಿದ್ದೇನೆ. ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದು ಪ್ರತಿವಾದಿಯರು ಹೇಳಿರುವುದು ಸುಳ್ಳು. ಸದರಿ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿರುವುದರಿಂದ ನನಗೆ ಹಕ್ಕು ಇದೆ.

ನನ್ನ ಗಂಡ ಹಾಗೂ ಮೈದನ ಮರಣ ಪ್ರಮಾಣ ಪತ್ರಗಳನ್ನು ಹಾಜರು ಪಡಿಸುತ್ತಿದ್ದೇನೆ. ಸದರಿ ದಾಖಲೆಗಳನ್ನು ನಿಪಿ–7 ಮತ್ತು 8 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ</u> ಪ್ರತಿವಾದಿಯ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.